# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ — 73
2. ಮಾನ್ಯ ಸದಸ್ಯರ ಹೆಸರು — ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ — 07/12/2020
4. ಉತ್ತರಿಸುವವರು — ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾರ್ಮಿಕ ಕಲ್ಯಾಣ ನಿಧಿಗೆ ನೋಂದಾಯಿಸುವಲ್ಲಿ ಕಟ್ಟಡ ಕಾರ್ಮಿಕರೆಂದು ವರ್ಗೀಕರಣದಲ್ಲಿ ಮೇಸನರಿ, ಬಡಗಿ ಪ್ಲಂಬರ್ ಇತರರನ್ನು ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇವರನ್ನು ನೋಂದಣಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು ; | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996 ರ ಕಲಂ 2(ಡಿ) ರನ್ವಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿರುವ ಎಲ್ಲಾ ವರ್ಗದ ಕಾರ್ಮಿಕರನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸಲಾಗುತ್ತಿದೆ.<br>ಮೇಸನರಿ, ಬಡಗಿ, ಪ್ಲಂಬರ್ ಗಳನ್ನು ಒಳಗೊಂಡಂತೆ ನಿರ್ಮಾಣ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕರನ್ನು ಯಾವುದೇ ವರ್ಗೀಕರಣವಿಲ್ಲದೇ ನೋಂದಾಯಿಸಲಾಗಿರುತ್ತದೆ.<br>ಕಾರ್ಮಿಕ ಇಲಾಖೆಯ ಎಲ್ಲಾ ಕಾರ್ಮಿಕ ನಿರೀಕ್ಷಕರು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರನ್ನು ನೋಂದಣಾಧಿಕಾರಿಗಳಾಗಿ ಸರ್ಕಾರದಿಂದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ನೋಂದಣಿಗಾಗಿ ಸೇವಾ ಸಿಂಧು ತಂತ್ರಾಂಶದ ಮೂಲಕ ಸ್ವೀಕರಿಸಲಾಗುವ ಅರ್ಜಿಗಳನ್ನು ಅವರು ಕಾಯ್ದೆಯ ಪ್ರಾವಧಾನಗಳನ್ವಯ ನೋಂದಾಯಿಸಲು ಕ್ರಮ ವಹಿಸುತ್ತಾರೆ. |
| ಆ) | ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಯಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಸ್ಥಳೀಯ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ ಹಾಗೂ ನಗರ ಸಭೆಗಳಿಂದ ಜಮೆಯಾದ ಹಣವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷದಲ್ಲಿ ತುಮಕೂರು ಜಿಲ್ಲೆಯ ಸ್ಥಳೀಯ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ ಹಾಗೂ ನಗರ ಸಭೆಗಳಿಂದ ಸುಂಕ ರೂಪದಲ್ಲಿ ಮಂಡಳಿಗೆ ಸಂಗ್ರಹವಾಗಿರುವ ಸೆಸ್ ಮೊತ್ತದ ತಾಲ್ಲೂಕುವಾರು ಮಾಹಿತಿಯನ್ನು <u>ಅನುಬಂಧ-01</u> ರಲ್ಲಿ ಲಗತ್ತಿಸಿದೆ |
| ಇ) | ಈ ಜಿಲ್ಲೆಯಲ್ಲಿ ಕಾರ್ಮಿಕರ ಆರೋಗ್ಯ ವೆಚ್ಚ ಭರಿಸಲು ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ತುಮಕೂರು ಜಿಲ್ಲೆಯಲ್ಲಿ ವೈದ್ಯಕೀಯ ಸಹಾಯಧನದಡಿ ಸ್ವೀಕರಿಸಲಾದ ಅರ್ಜಿಗಳ ವಿವರವನ್ನು <u>ಅನುಬಂಧ-02</u> ರಲ್ಲಿ ಲಗತ್ತಿಸಿದೆ. |
| ಈ) | ಮಂಜೂರಾಗದೇ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಅದಕ್ಕೆ ಕಾರಣಗಳೇನು ? | ಮಂಜೂರಾತಿಗಾಗಿ 25 ಅರ್ಜಿಗಳು ಬಾಕಿ ಉಳಿದಿದ್ದು, ಸದರಿ ಅರ್ಜಿಗಳು ವೈದ್ಯಕೀಯ ಧನಸಹಾಯದ ಅರ್ಜಿಗಳಾಗಿದ್ದು, ಸಂಬಂಧಿಸಿದ ಕಾರ್ಮಿಕ ಅಧಿಕಾರಿಗಳು ಸದರಿ ಅರ್ಜಿಗಳಲ್ಲಿ ಕೋರಿರುವ ಸಹಾಯ ಧನದ ಮೊತ್ತವನ್ನು ಸಿ.ಜಿ.ಹೆಚ್.ಎಸ್ ದರಗಳಂತೆ ಪರಿಶೀಲಿಸಿ ನಿಗಧಿಪಡಿಸಿ ಮಂಜೂರು ಮಾಡಲು ಕ್ರಮ ಕೈಗೊಳ್ಳುತ್ತಿರುತ್ತಾರೆ. |

ಕಾಇ 391 ಎಲ್ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

Scanned with CamScanner

ಅನುಬಂಧ-01

ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಯ ಸ್ಥಳೀಯ ಗ್ರಾಮ ಪಂಚಾಯಿತಿಗಳಿಂದ ಸಂಗ್ರಹವಾದ ಸುಂಕ ಮೊತ್ತದ ವಿವರ(2017-18 ರಿಂದ 2019-2020)

| ಕ್ರ ಸಂ | ತಾಲೂಕುವಾರು ವಿವರ | ಸಂಗ್ರಹವಾದ ಸುಂಕ ಮೊತ್ತ |
|---|---|---|
| 1 | ಚಿಕ್ಕನಾಯಕನಹಳ್ಳಿ | 1,54,604/- |
| 2 | ಗುಬ್ಬಿ | 4,28,903/- |
| 3 | ಕೊರಟಗೆರೆ | 2,41,614/- |
| 4 | ಕುಣಿಗಲ್ | 2,71,785/- |
| 5 | ಮಧುಗಿರಿ | 1,06,520/- |
| 6 | ಪಾವಗಡ | 73,031/- |
| 7 | ಶೀರಾ | 2,88,643/- |
| 8 | ತಿಪಟೂರು | 3,54,318/- |
| 9 | ತುಮಕೂರು | 7,29,450/- |
| 10 | ತುರುವೇಕೆರೆ | 61,658/- |
| ಒಟ್ಟು | | 27,10,526/- |

ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆಯ ಸ್ಥಳೀಯ ಪಟ್ಟಣ ಪಂಚಾಯಿತಿ, ಪುರಸಭೆ, ಮತ್ತು ನಗರಸಭೆಗಳಿಂದ ಸಂಗ್ರಹವಾದ ಸುಂಕ ಮೊತ್ತದ ವಿವರ(2017-18 ರಿಂದ 2019-2020)

| ಕ್ರ ಸಂ | ಪಟ್ಟಣ ಪಂಚಾಯತ್ | ಸಂಗ್ರವಾದ ಸುಂಕ ಮೊತ್ತ |
|---|---|---|
| 1 | ಗುಬ್ಬಿ | 19,60,872/- |
| 2 | ಕೊರಟಗೆರೆ | 6,44,269/- |
| 3 | ತುರುವೇಕೆರೆ | 10,20,725/- |
| | ಒಟ್ಟು | 36,25,866/- |

| ಕ್ರ ಸಂ | ನಗರಸಭೆ | ಸಂಗ್ರವಾದ ಸುಂಕ ಮೊತ್ತ |
|---|---|---|
| 1 | ಶೀರಾ | 42,66,423/- |
| 2 | ತಿಪಟೂರು | 50,74,838/- |
| 3 | ತುಮಕೂರು | 2,15,63,387/- |
| | ಒಟ್ಟು | 3,09,04,648/- |

| ಕ್ರ ಸಂ | ಪುರಸಭೆ | ಸಂಗ್ರವಾದ ಸುಂಕ ಮೊತ್ತ |
|---|---|---|
| 1 | ಚಿಕ್ಕನಾಯಕನಹಳ್ಳಿ | 8,09,468/- |
| 2 | ಕುಣಿಗಲ್ | 4,35,680/- |
| 3 | ಮಧುಗಿರಿ | 9,62,361/- |
| 4 | ಪಾವಗಡ | 5,21,594/- |
| | ಒಟ್ಟು | 27,29,103/- |

ಅನುಬಂಧ-2

ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು ಸ್ವೀಕರಿಸಲಾದ ವೈದ್ಯಕೀಯ ಧನಸಹಾಯದ ವಿವರಗಳು

| ಕ್ರ.ಸಂ | ತಾಲ್ಲೂಕು | ವೈದ್ಯಕೀಯ ಸಹಾಯಧನ ಸೌಲಭ್ಯದಡಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ |
|---|---|---|
| 01 | ತುಮಕೂರು | 86 |
| 02 | ಗುಬ್ಬಿ | 09 |
| 03 | ಚಿಕ್ಕನಾಯಕನ ಹಳ್ಳಿ | 01 |
| 04 | ತುರುವೇಕೆರೆ | 08 |
| 05 | ತಿಪಟೂರು | 01 |
| 06 | ಶಿರಾ | 18 |
| 07 | ಮಧುಗಿರಿ | 16 |
| 08 | ಕೊರಟಗೆರೆ | 01 |
| 09 | ಪಾವಗಡ | 25 |
| 10 | ಕುಣಿಗಲ್ | 37 |
| ಒಟ್ಟು | | 205 |